**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-03-2026)**

**ಮುಂದುವರೆದ ಪಾಟೀ ಸವಾಲುಃ 1 ರಿಂದ 5ನೇ ಪ್ರತಿವಾದಿಗಳ ಪರ ಶ್ರೀ ಎಸ್.ವಿ.ಎ. ವಕೀಲರಿಂದ,**

6. ದಾವಾ ಆಸ್ತಿಯಲ್ಲಿ ಬರುವ ಉತ್ಪನ್ನವನ್ನು ಹೊರತುಪಡಿಸಿ ಬೇರೆ ಯಾವುದೇ ಉತ್ಪನ್ನ ನನ್ನ ತಂದೆಯವರಿಗೆ ಇರಲಿಲ್ಲ ಎಂದರೆ ಹೌದು. ಅದೇ ರೀತಿ ನನ್ನ ಸಹೋದರರಿಗೂ ಕೂಡ ದಾವಾ ಆಸ್ತಿಯಲ್ಲಿ ಬರುವ ಉತ್ಪನ್ನವನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ್ಯ ಉತ್ಪನ್ನ ಇರಲಿಲ್ಲ ಎಂದರೆ ಸಾಕ್ಷಿಯು ಅವರು ಬೇರೆ ಕಡೆಯೂ ಸಹ ಕೂಲಿ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ನನ್ನ ಅಜ್ಜ ಮಂಜು ಪಕ್ಕಿ ರವರ ಮರಣದ ನಂತರ ವಾರಸನಾತೆಯಿಂದ ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ ಎಂದರೆ ಹೌದು. ದಾವಾ ಆಸ್ತಿಗಳು ನನ್ನ ಅಜ್ಜ ಮಂಜು ಪಕ್ಕಿ ರವರ ಗೇಣಿ ಆಸ್ತಿಗಳು ಎಂದರೆ ಸರಿಯಲ್ಲ. ಅವರ ಸ್ವಂತ ಆಸ್ತಿ ಆಗಿರುತ್ತದೆ. ನನ್ನ ಅಜ್ಜ ದಾವಾ ಆಸ್ತಿಗಳ ಸಂರಕ್ಷಿತ ಕುಳ (Protected Tenant) ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ತಂದೆಯಾದ 1ನೇ ಪ್ರತಿವಾದಿಯವರು ಭೂ ನ್ಯಾಯಾ ಮಂಡಳಿಗೆ ಯಾವಾಗ ಅರ್ಜಿ ಸಲ್ಲಿಸಿದ್ದರೂ ಯಾವಾಗ ಆದೇಶ ಆಯಿತು ಎಂಬ ಬಗ್ಗೆ ಗೊತ್ತಿದೇಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನ್ನ ಅಜ್ಜನ ಆಸ್ತಿ ಎಂದು ಉತ್ತರಿಸಿರುತ್ತಾರೆ. ನನ್ನ ಅಜ್ಜ ಮಂಜು ಪಕ್ಕಿರವರು ಮರಣದ ನಂತರ ದಾವಾ ಆಸ್ತಿಗಳ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಬಂದಿರುತ್ತದೆ. ಇವತ್ತಿನವರೆಗೂ ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಹೌದು.

7. ನನ್ನ ತವರು ಮನೆಯ ಕುಟುಂಬ ದೊಡ್ಡ ಕುಟುಂಬ ಆಗಿದ್ದು ಅದರ ನಿರ್ವಹಣೆಗೆ ಯಾವಾಗಲೂ ಹಣದ ಅಡಚಣೆ ಉಂಟಾಗುತ್ತಿತ್ತು ಎಂದರೆ ಸಾಕ್ಷಿಯು ಹಣದ ಅಡಚಣೆ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಯಾದ 1ನೇ ಪ್ರತಿವಾದಿಯ ಬಳಿ ಕುಟುಂಬ ನಿರ್ವಹಣೆಯನ್ನು ಹೇಗೆ ಮಾಡುತ್ತಿದ್ದಾರೆ ಎಂಬ ಬಗ್ಗೆ ನಾನು ವಿಚಾರಿಸಿರುತ್ತೇನೆ. ದಾವಾ ಆಸ್ತಿಗಳು ಯಾವ ಸ್ವರೂಪದ ಆಸ್ತಿಗಳು ಅಂದರೆ ಭಾಯ್ತಾ , ತರಿ ಅಥವಾ ಖುಷ್ಕಿ ಜಾಗವೂ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿರುವ 2ನೇ ಆಸ್ತಿಯು ಗದ್ದೆ ಇರುವ ಜಮೀನಾಗಿದ್ದು ಅದಕ್ಕೆ ದಾರಿ ಇರುವುದಿಲ್ಲ. ದಾವಾ 1, 3 ರಿಂದ 6ನೇ ಆಸ್ತಿಗಳಿಗೆ ಡಾಂಬರು ರಸ್ತೆ ಇರುತ್ತದೆ. 7ನೇ ಪ್ರತಿವಾದಿ ಮತ್ತು ಮೃತ 6ನೇ



ಪ್ರತಿವಾದಿಯವರ ಪರಿಚಯ ನನಗೆ ಇರುವುದಿಲ್ಲ. ನನ್ನ ತಂದೆ 1ನೇ ಪ್ರತಿವಾದಿ ದಾವಾ ಆಸ್ತಿಯ 2ನೇ ಸ್ವತ್ತಿನಲ್ಲಿ ತಲಾ 5 ಗುಂಟೆಯಂತೆ ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಆ ರೀತಿ ಯಾವಾಗ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಮಾರಾಟದ ಬಗ್ಗೆ ಯಾವಾಗ ತಿಳಿದು ಬಂತು ಎಂದರೆ ಸಾಕ್ಷಿಯು ಮೂರು ವರ್ಷಗಳ ಹಿಂದೆ ಪಾಲು ಕೇಳಿದಾಗ ತಂದೆ ಪಾಲು ನೀಡುವುದಿಲ್ಲ ಎಂದು ಹೇಳಿದ್ದು ಆಗ ತಿಳಿದು ಬಂತು ಎಂದು ಉತ್ತರಿಸಿರುತ್ತಾರೆ. ಸದ್ರಿ ಮಾರಾಟದ ನಂತರ 7ನೇ ಪ್ರತಿವಾದಿ ಮತ್ತು ಮೃತ 6ನೇ ಪ್ರತಿವಾದಿಯವರು ತಾವು ಕ್ರಯಕ್ಕೆ ಪಡೆದ ಜಮೀನಿನ ಕಬ್ಜಾವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಕ್ರಯ ಪತ್ರದ ಬಗ್ಗೆ ತಿಳಿದು ಬಂದ ನಂತರ ತಕ್ಷಣ ಸದ್ರಿ ಕ್ರಯ ಪತ್ರಗಳನ್ನು ರದ್ದು ಪಡಿಸಲು ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಮೇಲೆ

ಹೇಳಿದ ಕ್ರಯ ಪತ್ರಗಳ ನಂತರ 2ನೇ ದಾವಾ ಸ್ವತ್ತಿನ ಸರ್ವೆ ನಂಬರ್ ಪ್ರತ್ಯೇಕ ಹಿಸ್ಸಾಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಪಾಲು ಕೊಡುವುದಿಲ್ಲ ಎಂದು ಹೇಳಿದ ನಂತರ ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ತೆಗೆಸಿ ನೋಡಿರುತ್ತೇನೆ. ಈ ಮೇಲೆ ಹೇಳಿದ ಕ್ರಯ ಪತ್ರ ಆದ ತಕ್ಷಣ 2004ನೇ ಇಸವಿಯಲ್ಲಿ 2ನೇ ದಾವಾ ಸ್ವತ್ತಿನ ಸರ್ವೆ ನಂಬರ್ ಪ್ರತ್ಯೇಕ ಹಿಸ್ಸಾಗಳಾಗಿರುತ್ತದೆ ಎಂದರೆ ಗೊತ್ತಿಲ್ಲ. ಈ ಮೇಲೆ ಹೇಳಿದಂತೆ 7ನೇ ಪ್ರತಿವಾದಿ ಮತ್ತು ಮೃತ 6ನೇ ಪ್ರತಿವಾದಿಯವರರಿಗೆ ಆದ ಕ್ರಯ ಪತ್ರಗಳು 2004ನೇ ಇಸವಿಯಲ್ಲಿ ನನ್ನ ತಿಳುವಳಿಕೆಗೆ ಇದ್ದೆ ಆಗಿರುತ್ತದೆ ಎಂದರೆ ಸರಿಯಲ್ಲ. ಹಾಗಾಗಿಯೇ ಷದ್ರಿ ಮಾರಾಟ ಆದ ಸ್ವತ್ತಿನಲ್ಲಿ ಹಕ್ಕು ಇಲ್ಲದೇ ಇರುವ ಬಗ್ಗೆ ನನಗೆ ಗೊತ್ತಿದ್ದೆ ಷದ್ರಿ ಕ್ರಯ ಪತ್ರಗಳ ರದ್ದತ್ತಿಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆ 1ನೇ ಪ್ರತಿವಾದಿಯ ಸ್ವಂತ ಆಸ್ತಿಗಳಾಗಿರುವುದರಿಂದ ಅವರ ಜೀವಿತ ಕಾಲದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಕುಟುಂಬದ ಗರ್ಜಿನ ಸಂಬಂಧ ಈ ಮೇಲೆ ಹೇಳಿದಂತೆ ದಾವಾ 2ನೇ ಸ್ವತ್ತಿನಲ್ಲಿ 7 ಮತ್ತು ಮೃತ 6ನೇ ಪ್ರತಿವಾದಿಯವರಿಗೆ 1ನೇ ಪ್ರತಿವಾದಿ ಜಾಗ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ದಾವಾ ಸ್ವತ್ತಿನಲ್ಲಿನ ಪಾಲು ಪಟ್ಟಿಗೆ ಹಾಕಿದ ಈ ದಾವೆ ನಿಲ್ಲತಕ್ಕದಲ್ಲ ಎಂದರೆ ಸರಿಯಲ್ಲ.

**6 ಮತ್ತು 7ನೇ ಪ್ರತಿವಾದಿಗಳ ಪರ ವಕೀಲರು ಪಾಟೀಸವಾಲು ಮಾಡಲು ಕಾಲವಕಾಶ ಕೋರಿದ್ದರಿಂದ ಮುಂದುಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**